# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾಂಡೇಲಿ

**ಸಿ.ಸಿ.ನಂ. 118 -2016**

ಫಿರ್ಯಾದಿ : ದಿಃ ವೆಷ್ಟ ಕೋಷ್ಟ ಪೇಪರ್ ಮಿಲ್
ಲಿಮಿಟೆಡ್, ದಾಂಡೇಲಿ.
ಇದರ ಪರವಾಗಿ ಶ್ರೀ ಜಿ.ಎಲ್.ಭಾಗವತ್

ವಿರುದ್ಧ

ಆರೋಪಿತ : ಮೆಃ ಸುಬ್ರಮಣ್ಯ ಆ್ಯಂಡ್ ಕಂಪನಿ
ಇದರ ಪರವಾಗಿ ಎಸ್.ಜಿ.ಕಾರ್ತಿಕ್
ವಯಸ್ಕ, ಹಳೆ ನಂ. 27
ಪೊನ್ನುಸ್ವಾಮಿ ಗಲ್ಲಿ, ರಾಯಪೇಟ್, ಚೆನ್ನೈ
ಚೆನ್ನೈ

## ಆಪಾದನೆ

ಆರೋಪಿತರಾದ ನೀವು ಫಿರ್ಯಾದಿಯ ಪೆಪರ್ ಮಿಲ್‌ನಿಂದ ಪೆಪರ್ ಬೊರ್ಡ್‌ಗಳನ್ನು ಖರೀದಿಸಿ ಮಾರಾಟ ಮಾಡುವವರಿದ್ದು, ಹೀಗೆ ನೀವು ದಿನಾಂಕಃ 11-01-2014 ರಿಂದ 09-11-2014 ರವರೆಗೆ ಸುಮಾರು ರೂ. 82,80,223-00 ಬೆಲೆಬಾಳುವ ಪೇಪರ್ ಬೊರ್ಡಗಳನ್ನು ಪಿರ್ಯಾದಿ ಕಂಪನಿಯಿಂದ ಖರೀದಿಸಿಕೊಂಡಿದ್ದು ಮತ್ತು ಅದರಂತೆ ನೀವು ಪಿರ್ಯಾದಿ ಕಂಪನಿಗೆ ಕೊಡಬೇಕಾಗಿದ್ದ ಬಾದ್ಯತೆ ರೂ. 43,30,354-00 ಹಣದ ತೀರುವಳಿಗಾಗಿ ಸದ್ರಿ ಮೊತ್ತಕ್ಕೆ ದಿಃ 01-04-2016 ರ ದಿನಾಂಕವನ್ನು ನಮೂದಿಸಿದ ಸೌತ್ ಇಂಡಿಯನ್ ಬ್ಯಾಂಕ್, ಚೆನ್ನೈ ಶಾಖೆಯ ಒಂದು ಚೆಕ್ಕ ನಂಬರ. 316783 ನ್ನು ರೂ. 10,000,00-00 ಬರೆದು ಫಿರ್ಯಾದುದಾರ ಕಂಪನಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರನು ಹಣ ನಗದೀಕರಿಸಲು ಫಿರ್ಯಾದಿ ಕಂಪನಿಯ ಖಾತೆಯಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ, ದಾಂಡೇಲಿ ಶಾಖೆಗೆ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎನ್ನುವ ಕಾರಣಕ್ಕಾಗಿ ಚೆಕ್ ಅಮಾನ್ಯವಾಯಿತು. ಆ ಬಳಿಕ ಫಿರ್ಯಾದುದಾರ ಕಂಪನಿಯು ನಿಮಗೆ ವಕೀಲರ ಮುಖಾಂತರ ಒಂದು ನೋಟೀಸನ್ನು ಕಳುಹಿಸಿ, ಹಣ ಮರುಪಾವತಿ ಮಾಡುವಂತೆ ಕೇಳಿಕೊಂಡರೂ

ಕೂಡ ನೀವು ಫಿರ್ಯಾದುದಾರ ಕಂಪನಿಗೆ ಹಣ ಮರು ಪಾವತಿ ಮಾಡಿಲ್ಲ. ಆದಕಾರಣ, ಈ ಮೂಲಕ ನೀವು ಲಿಖಿತಗಳ ವರ್ಗಾವಣೀಯ ಅಧಿನಿಯಮ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಪ್ರ. 1 ಃ ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ ಃ

ಪ್ರ. 2 ಃ ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೇ ?

ಉತ್ತರ ಃ

(ಆರೋಪಿತರಿಗೆ ಆಪಾದನೆಯ ಸಾರಾಂಶವನ್ನು ಆತನಿಗೆ ತಿಳಿದ ಭಾಷಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು.)

ದಾಂಡೇಲಿ

ದಿಃ 26-09-2017. ಪ್ರ.ದ.ನ್ಯಾ.ದಂ., ದಾಂಡೇಲಿ